# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 204(245)
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ: : 04.03.2020
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೈತರಿಗೆ ಪ್ರಧಾನ ಮಂತ್ರಿಗಳ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿಯಲ್ಲಿ ಅರ್ಹ ಕೃಷಿ ಆಧಾರಿತ ಕುಟುಂಬಗಳಿಗೆ ವಾರ್ಷಿಕ ರೂ. 6000/- ಮತ್ತು ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ರೂ.4000/- ಗಳನ್ನು ಕಂತುಗಳಲ್ಲಿ ನೀಡಲಾಗುತ್ತಿದೆಯೇ; | ಹೌದು. |
| ಆ | ಕೇಂದ್ರ ಮತ್ತು ರಾಜ್ಯ ಸರ್ಕಾರ ಇದುವರೆವಿಗೂ ಎಷ್ಟು ಕಂತುಗಳಲ್ಲಿ ಎಷ್ಟು ಮಂದಿ ಫಲಾನುಭವಿಗಳಿಗೆ ಹಣವನ್ನು ಪಾವತಿಸಲಾಗಿದೆ; | ಕೇಂದ್ರ ಸರ್ಕಾರದ **ಪಿ.ಎಂ.ಕಿಸಾನ್** ಯೋಜನೆ ಯಡಿ ಪ್ರತಿ ಕಂತಿಗೆ ರೂ.2000/- ರಂತೆ ಒಟ್ಟು ನಾಲ್ಕು ಕಂತುಗಳಲ್ಲಿ ಅರ್ಹ ಫಲಾನುಭವಿಗಳಿಗೆ ಹಣ ಪಾವತಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.<br>**ಪಿ.ಎಂ.ಕಿಸಾನ್ ಪೋರ್ಟಲ್ (26.02.2020 ವರದಿಯಂತೆ)**<br>(ಕೋಷ್ಟಕ ಕೆಳಗೆ)<br>ರಾಜ್ಯ ಸರ್ಕಾರದ **ಪಿ.ಎಂ.ಕಿಸಾನ್-ಕರ್ನಾಟಕ** ಯೋಜನೆಯಡಿ 4281207 ರೈತರಿಗೆ ರೂ. 2000/- ಮೊದಲನೇ ಕಂತಿನ ಆರ್ಥಿಕ ನೆರವು ನೀಡಲಾಗಿರುತ್ತದೆ. (www.fruits.karnataka.gov.in ಪೋರ್ಟಲ್ ನ 26.02.2020 ವರದಿಯಂತೆ) |
| ಇ | ಸದರಿ ಯೋಜನೆಯ ಉದ್ದೇಶಗಳು ಹಾಗೂ ಮಾರ್ಗಸೂಚಿಗಳೇನು? (ವಿವರ ನೀಡುವುದು) | ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ದಿನಾಂಕ. 01.12.2018 ರಿಂದ ಅನ್ವಯವಾಗುವಂತೆ ಫೆಬ್ರವರಿ 2019 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ರೈತರಿಗೆ ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯಗಳಿಸಲು ನೆರವಾಗುವ ಉದ್ದೇಶದಿಂದ ಸಾಗುವಳಿ ಭೂಮಿ ಹೊಂದಿರುವ (01.02.2019 ರಂತೆ ಸ್ವಾಧೀನದಲ್ಲಿರುವ/ ಭೂದಾಖಲೆಯಲ್ಲಿ ಹೆಸರಿರುವ) ಎಲ್ಲಾ ಅರ್ಹ ರೈತ ಕುಟುಂಬ (ಒಂದು ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು)ಕ್ಕೆ ವಾರ್ಷಿಕ ರೂ.6000/-ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಸದರಿ ನೆರವನ್ನು ರೂ.2000/-ಗಳಂತೆ ಮೂರು |

ಪಿ.ಎಂ.ಕಿಸಾನ್ ಪೋರ್ಟಲ್ (26.02.2020 ವರದಿಯಂತೆ) ಕೋಷ್ಟಕ:

| ಕ್ರ. ಸಂ | ಕಂತು | ಆರ್ಥಿಕ ವರ್ಗಾವಣೆ ಆದೇಶ | ಪಾವತಿಸಲಾದ ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಮೊದಲನೇ ಕಂತು | 4912445 | 4880441 |
| 2 | ಎರಡನೇ ಕಂತು | 4724660 | 4681699 |
| 3 | ಮೂರನೇ ಕಂತು | 3604478 | 3580877 |
| 4 | ನಾಲ್ಕನೇ ಕಂತು | 370126 | 3086 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು.<br>ಜಮೀನು ಹೊಂದಿದ ಪ್ರತಿಯೊಬ್ಬ ರೈತ ಕುಟುಂಬ ಈ ಯೋಜನೆಯಡಿ ಆರ್ಥಿಕ ಸಹಾಯ ಪಡೆಯಲು ಅರ್ಹನಾಗಿರುತ್ತಾನೆ. ಆದರೆ, ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಭೂಮಿ ಹೊಂದಿರುವ ಸಂಘ ಅಥವಾ ಸಂಸ್ಥೆಗಳು, ಕುಟುಂಬ ಸದಸ್ಯರು ಮಾಜಿ ಅಥವಾ ಹಾಲಿ ಸಾಂವಿಧಾನಿಕ ಹುದ್ದೆಗಳನ್ನು ಹೊಂದಿದ್ದಲ್ಲಿ, ಮಾಜಿ ಮತ್ತು ಹಾಲಿ ಸಚಿವರು/ರಾಜ್ಯ ಸಚಿವರು/ಲೋಕಸಭಾ ಸದಸ್ಯರು/ರಾಜ್ಯಸಭೆ ಸದಸ್ಯರು/ರಾಜ್ಯ ವಿಧಾನಸಭೆ/ವಿಧಾನ ಪರಿಷತ್ತಿನ ಸದಸ್ಯರು/ನಗರಸಭೆ ಅಧ್ಯಕ್ಷರು/ಪುರಸಭೆ ಅಧ್ಯಕ್ಷರು/ಜಿಲ್ಲಾಪಂಚಾಯಿತಿ ಅಧ್ಯಕ್ಷರು, ನಿವೃತ್ತಿ/ಹಾಲಿ ಸೇವೆಯಲ್ಲಿರುವ ಕೇಂದ್ರ/ ರಾಜ್ಯ ಸರ್ಕಾರಗಳ /ಸಚಿವಾಲಯ ಕಛೇರಿ/ ಇಲಾಖೆ/ ಕ್ಷೇತ್ರ ಕಛೇರಿಗಳು/ ಕೇಂದ್ರ/ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಅಂಗ ಸಂಸ್ಥೆಗಳು/ ಸ್ವಾಯತ್ತ ಸಂಸ್ಥೆಗಳ ಅಧಿಕಾರಿಗಳು ಹಾಗೂ ನೌಕರರು/ ಸ್ಥಳೀಯ ಸಂಸ್ಥೆಗಳ ಖಾಯಂ ನೌಕರರು (ಗ್ರೂಪ್ ಡಿ/ 4ನೇ ವರ್ಗ/ Multi Tasking Staff ಹೊರತುಪಡಿಸಿ), ರೂ. 10,000/- ಅಥವಾ ಹೆಚ್ಚಿನ ಮೊತ್ತ ಪಡೆಯುತ್ತಿರುವ ವಯೋನಿವೃತ್ತ/ ನಿವೃತ್ತ ಪಿಂಚಣಿದಾರರು. (ಗ್ರೂಪ್ ಡಿ/ 4ನೇ ವರ್ಗ/ Multi Tasking Staff ಹೊರತುಪಡಿಸಿ),<br>ಕಳೆದ ಸಾಲಿನ ಆದಾಯ ತೆರಿಗೆ ಪಾವತಿದಾರರು, ವೈದ್ಯ, ಅಭಿಯಂತರ, ವಕೀಲ, ಲೆಕ್ಕಪರಿಶೋಧಕರು, ವಾಸ್ತು ಶಿಲ್ಪದಂತಹ ವೃತ್ತಿಪರ ಸಂಸ್ಥೆಯಲ್ಲಿ ನೊಂದಾಯಿಸಿಕೊಂಡು ಸದರಿ ವೃತ್ತಿಯನ್ನು ಕೈಗೊಳ್ಳುತ್ತಿರುವವರು ಈ ಯೋಜನೆಯಡಿ ಆರ್ಥಿಕ ಸಹಾಯ ಪಡೆಯಲು ಅನರ್ಹರಾಗಿರುತ್ತಾರೆ.<br>ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ದಿನಾಂಕ14.08.2019 ರಿಂದ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.4000/ಗಳನ್ನು (ಆರ್ಥಿಕ ನೆರವನ್ನು) ಎರಡು ಕಂತುಗಳಲ್ಲಿ **ಪಿ.ಎಂ.ಕಿಸಾನ್-ಕರ್ನಾಟಕ** ಯೋಜನೆಯಡಿ ನೀಡಲಾಗುತ್ತಿದೆ. |

ಕೃಇ/22/ಕೃಕೈಉ/2020

(ಬಿ.ಸಿ.ಪಾಟೀಲ್)
ಕೃಷಿ ಸಚಿವರು 21/3/2020